ನಂ. 9. ತಾರೀಖು 25ನೇ ಅಕ್ಟೋಬರ್ 1876.

ಬೆಂಗಳೂರು ಡಿಸ್ಟ್ರಿಕ್ಟ್ ಕಾರ್ಖಾನಹಳ್ಳಿ ತಾಲ್ಲೂಕುನಲ್ಲಿ ಯಿರುವ ಇನಾಂಗಳ ಸಲುವಳಿ ವಿಚಾರಣೆಯೂ ಇನಾಂ ಸೆಟಲ್ ಮೆಂಟ್ ಅಸಿಸ್ಟೆಂಟ್ ಸೂಪರ್‌ಇಂಟೆಂಡೆಂಟ್ ಮೆಸ್ಸರ್ ಸೈಯದ ನಸೀರುದ್ದೀನ್‌ಯವರಿಂದ ಹಾರೋಹಳ್ಳಿಯಲ್ಲಿ ನಡಿಸಲ್ಪಟ್ಟು 1876ನೇ ನವೆಂಬರ್ 15ನೇ ಮುಕ್ತಂನೊಳಗೆ ಪುರುವಾಗುವದು.

2. ಸದರೀ ತಾಲ್ಲೂಕಿನಲ್ಲಿರುವ ಇನಾಂಗಳ್ಳೊಳಗೆ ಸಂಬಂಧವುಳ್ಳ ದರೋಬಸ್ತು ಜನಗಳೂ ರೂಬರೂ ಯಾ ತಮ್ಮ ಮುಖ್ತಾರೀ ಕರ ಮೂಲಕ ಹಾಜರಾಗಿ ತನ್ನು ತಮ್ಮ ಹಕ್ಕು ದಾರೀಗಳನ್ನು ಕುರಿತು ವ್ಯವಹರಿಸಿಕ್ಕೊಳ್ಳುವದಕ್ಕೂ ತಮ್ಮ ವಶದಲ್ಲಿರುವ ಸನ್ನದುಗಳು ವ ಯಿತರ ದಸ್ತಾವೇಜುಗಳನ್ನು ಹಾಜರ್ ಮಾಡಲಿಕ್ಕೂ ಯಿದರಿಂದ ತಾಕೀದ್ ಮಾಡಲ್ಪಟ್ಟಿರುತ್ತಾರೆ ಹಾಗೆ ಮಾಡದೆ ಯಿದ್ದ ಪಕ್ಷಕ್ಕೆ ಪ್ರಥನುತಃ ಇನಾಂಗಳು ಜಪ್ತೀಕೆಳಗೆ ತರಲ್ಪಟ್ಟು ತರುವಾಯು ಆಖೈರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

ನಂ. 10. ತಾರೀಖು 25ನೇ ಅಕ್ಟೋಬರ್ 1876.

ಸ್ಯ 1876ನೇ ಅಕ್ಟೋಬರ್ 7ನೇ ಮುಕ್ತಂ ಮೈಸೂರು ಗೆಜೆಟ್ 2ನೇ ಭಾಗದ 92ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ ಮಾಹೇ ಮೆಜಕೂರ್ 3ನೇ ಮುಕ್ತಂ 6ನೇ ನಂಬರ್ ಯಿಸ್ತಿಹಾರ್ ನಾಮೇಯುಯಿದರಿಂದ ರದ್ದು ಮಾಡಲ್ಪಟ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನ ಇನಾಂವಿಚಾರಣೆ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಮುನಾವಾಡಿಯಿರುತ್ತೆ.

Registration of such service inams in the Kankanhalli Taluk as were alienated before the promulgation of the Chief Commissioner's Circular dated 11th September 1835, the alienee not performing the service for which inam was originally granted..

ಮೈಸೂರು ಶೀಮೆಯ ಇನಾಂ ಸೆಟಲ್ಮೆಂಟ್ ಆಫಿಸಿನಿಂದ.

ಇದರಿಂದ ಕಾನಖಾನಹಳ್ಳಿ ತಾಲ್ಲೂಕು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚೀಫ್ ಕಮ್ಮಿಷನರ್ ಸಾಹೆಬರವರ 1876ನೇ ಇಸವಿ ಅಕ್ಟೋಬರ್ 17ನೇ ತಾರೀಖಿನ 7037—216ನೇ ನಂಬರ್ ಪ್ರೊಸೀಡಿಂಗಸಿನ 1ನೇ ಪ್ಯಾರಾ ಹುಕ್ಕುಂಗಳ ಪ್ರಕಾರ ಶ್ಯಾನುಭೋಗ, ತಳವಾರ, ನೀರಗಂಟಿ, ತೋಟಿ, ಮುಂತಾದ ಸರಕಾರ ನೌಕರರ ಇನಾಂಗಳು ಈ ಡಿಪಾರ್ಟ್ಮೆಂಟಿನಿಂದ ಯಿನ್ನು ಮೇಲೆ ರಿಜಿಸ್ಟರ್ ಮಾಡಲ್ಪಡುವದಿಲ್ಲ.

2. ಆದರೆ ಸದರೀ ನೌಕರರ ಇನಾಂಗಳ್ಳೆ ಪೈಕೀ ಯಾವ ಇನಾಂಗಳಾದರೂ 1835ನೇ ಇಸವಿ ಶಪ್ಟಂಬರ್ 11ನೇ ತಾರೀಖಿನ ಚೀಫ್ ಕಮ್ಮಿಷನ್ನರ ಸಾಹೆಬರವರ ಸರ್ಕ್ಯುಲರ್ ಹುಕ್ಕುಮಿಗೆ ಪೂರ್ವವೇ ಪರಾಧೀನವಾಗಿ ಅಂಥಾವುಗಳನ್ನು ಹಾಲೀ ಅನುಭವಿಸುವವರು ನೌಕರೀ ಮಾಡದೇ ಇದ್ದಪಕ್ಷದಲ್ಲಿ ಅವುಮಾತ್ರ ಚೀಫ್ ಕಮ್ಮಿಷನ್ನರ ಸಾಹೆಬರವರ ಪ್ರೊಸೀಡಿಂಗಸಿನ 2ನೇ ಪ್ಯಾರಾ ಹುಕ್ಕುಂ ಪ್ರಕಾರ ಈ ಡಿಪಾರ್ಟ್ಮೆಂಟಿನಲ್ಲಿ ವಿಚಾರಣೆ ಮಾಡಲ್ಪಟ್ಟು ಅನುಭವದಾರ್ರಿಗೆ $\frac{1}{3}$ ಕ್ವಿಂಟ್‌ರೆಂಟ್ ಮೇಲೆ ಕಾಯಂ ಮಾಡಲ್ಪಡುತ್ತವಾದ್ದರಿಂದ ಯಿಂಥಾ ಇನಾಂದಾರ್ರು ಈ ತಾಲ್ಲೂಕು ಇನಾಂ ವಿಚಾರಣೆ ಮಾಡುವ ಅಸಿಸ್ಟೆಂಟರಲ್ಲಿ ದಸ್ತಾವೇಜುಗಳು ವಗೈರೇ ಸಹಿತ ಹಾಜರಾಗಿ ಸ್ಟೇಟ್‌ಮೆಂಟ್‌ಗಳು ದಾಖಲ್ಮಾಡಿ ಫೈಸಲ್ಪಡಿಯತಕ್ಕದೆಂದುನ್ನೂ,

ಆಪ್ರಕಾರ ವಿಚಾರಣೆ ಕಾಲದಲ್ಲಿ ಮತ್ತು ತಾಲ್ಲೂಕು ವಿಚಾರಣೇ ಕಾಲದಲ್ಲಿ ಸಹಾ ಫೈಸಲ್ಪಡಿಯದಿದ್ದರೆ ವುತ್ತರೋತ್ತರ ಯಾವಾಗಲು ಅವರ ದಾವೆ ಅಂಗೀಕರಿಸಲ್ಪಡಲಾರದೆಂದುನ್ನೂ ಇದರಿಂದ ಸಮಸ್ತರಿಗೂ ತಿಳಿಯಪಡಿಸಿ ಯಿದೆ.

ಇನಾಂ ಸೆಟಲ್ಮೆಂಟ್ ಆಫಿಸ್ ಬೆಂಗಳೂರು, ತಾರೀಖು 28—10—76.

R. A. Cole,
Supt. of Inam Settlements.

ಸರ್ವೆ ವ ಸೆಟಲ್ಮೆಂಟ್ ಇಲಾಖಾ.

ತಾರೀಖು 31ನೇ ಅಕ್ಟೋಬರ್ 1876.

ಮೈಸೂರು ರವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರ್‌ಇಂಟೆಂಡೆಂಟ್ ಲೆಫಟಿನೆಂಟ್ ಮೆಸಿಂಟ್ಯೈರ್‌ಯವರು 1876ನೇ ಇಸವಿ ಅಕ್ಟೋಬರು 7ನೇ ಮುಕ್ತಂ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟು ಆದೇಸಾಲ್ ಮಾಹೇ 5ನೇ ಮುಕ್ತಂ 241ನೇ ನಂಬರ್ ಚೀಫ್ ಕಮ್ಮಿಷನರ್ ಇಸ್ತಿಹಾರಿನಿಂದ ಕೊಡಲ್ಪಟ್ಟ 15 ದಿನಗಳ ಪ್ರಿವಿಲೀಜ್ ರಜಾದಮೇಲೆ 1876ನೇ ಇಸವಿ ಅಕ್ಟೋಬರು 10ರಲ್ಲು ಹೋಗಿ ಅದೇತಿಂಗಳು 24ನೇ ತಾರೀಖಿನಲ್ಲಿ ವಾಪಸು ಬಂದರು.

W. C. Anderson,
Survey and Settlement Commr.